ಸಾಕ್ಷಿಯನ್ನು ದಿನಾಂಕಃ 19-06-2024 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ ಶ್ರೀಃ ಎಸ್.ಎಸ್.ಡಿ , ಪ್ರತಿವಾದಿ ಪರ ವಕೀಲರಿಂದಃ

1. ನನ್ನ ಹೆಸರಿನಲ್ಲಿ ಕರಿಂಜೆ ಗ್ರಾಮದಲ್ಲಿ 1 ಎಕರೆ , ಕಲ್ಲಮುಂಡ್ಕೂರು ಗ್ರಾಮದಲ್ಲಿ 1½ ಎಕರೆ ಜಮೀನು ಇದೆ . 1 ಎಕರೆ ಜಮೀನನ್ನು ನನ್ನ ತಂದೆ ಮತ್ತು ತಾಯಿಯವರು 2009 ನೇ ಇಸವಿಯಲ್ಲಿ ವ್ಯವಸ್ಥಾ ಪತ್ರದ ಮೂಲಕ ನೀಡಿರುತ್ತಾರೆ. 1½ ಎಕರೆ ಜಮೀನನ್ನು ನನ್ನ ತಾಯಿ ನನಗೆ ವ್ಯವಸ್ಥಾ ಪತ್ರವನ್ನು ಮಾಡಿಕೊಟ್ಟಿರುತ್ತಾರೆ . ದಾವಾ ಆಸ್ತಿಯನ್ನು ಹೊರತು ಪಡಿಸಿ ಪ್ರತಿವಾದಿಗೆ ಅವರ ತಂದೆ-ತಾಯಿಂದ ಬೇರೆ ಆಸ್ತಿಗಳು ಬಂದಿರುವುದಿಲ್ಲ . ನಮ್ಮ ತಂದೆಗೆ ಒಟ್ಟು 10 ಜನ ಮಕ್ಕಳು ಅವರಲ್ಲಿ ಒಬ್ಬಳು ಹೆಣ್ಣು ಮಗಳು ಹಾಗೂ 9 ಜನ ಗಂಡು ಮಕ್ಕಳು . ಪ್ರದೀಪ್ ಕ್ಲಾಮಿನ್ ಪಿಂಟೊ 1 ಎಕರೆ , ಪಾಸ್ಕಲ್ ಪಿಂಟೋ ಸುಮಾರು 95 ಸೆಂಟ್ಸ್, ಸುಮಾರು 1 ಎಕರೆ 80 ಸೆಂಟ್ಸ್ ಜಾಗವನ್ನು ಜಾನ್ ವಿಲ್ಸನ್ ಪಿಂಟೋರವರಿಗೆ ನನ್ನ ತಾಯಿಯು ಅಕ್ರಮ-ಸಕ್ರಮ ಮಾಡಿಸಿಕೊಟ್ಟಿರುತ್ತಾರೆ .

2. ನನ್ನ ತಂದೆ ದಿಃ 22-01-2020 ರಂದು ಮರಣ ಹೊಂದಿರುತ್ತಾರೆ . ನನ್ನ ತಂದೆ ತೀರಿ ಹೋಗುವ ಮೊದಲು ನನ್ನ ಅಣ್ಣನಾದ ಪಾಸ್ಕಲ್ ಪಿಂಟೋ ರವರ ಜೊತೆ ಇದ್ದರು , ದಿಃ 11-10-2018 ರಂದು ನನ್ನ ತಂದೆ ಅವರ ವಕೀಲರ ಮುಾಲಕ ನನಗೆ ನೋಟೀಸನ್ನು ನೀಡಿರುತ್ತಾರೆ ಎಂದರೆ ಸರಿ . ಸದರಿ ನೋಟೀಸನ್ನು ನೋಡುತ್ತಿದ್ದು ಅದನ್ನು ನಿಡಿ-1 ಎಂದು ಗುರುತಿಸಲಾಯಿತು . ಅದೇ ರೀತಿ ನಮ್ಮ ತಂದೆ ಪ್ರತಿವಾದಿಗೆ ಸೆಟಲ್ ಮೆಂಟ್ ಡೀಡ್ ನ್ನು ಮಾಡಿಕೊಟ್ಟಿದ್ದು , ಅವರ ಹೆಸರಿಗೆ ಆರ್.ಟಿ.ಸಿ ಆಗಬಾರದು ಎಂದು ತಹಶೀಲ್ದಾರ್ ರವರಿಗೆ ಆಕ್ಷೇಪಣೆಯನ್ನು ಸಲ್ಲಿಸಿದ್ದೆ ಎಂದರೆ ಹೌದು .

3. ತಹಶೀಲ್ದಾರ್ ಕಚೇರಿಯಲ್ಲಿ ವಿಚಾರಣೆಯ ಸಮಯದಲ್ಲಿ ನಮ್ಮ ತಂದೆ ಖುದ್ದು ಹಾಜರಾಗಿದ್ದರು ಎಂದರೆ ಸರಿಯಲ್ಲ . ನಮ್ಮ ತಂದೆ ಖುದ್ದು ಹಾಜರಾಗಿದ್ದರೂ ಸಹ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಿಡಿ-1 ಕ್ಕೆ ನಾನು ಶಾಂತಿ ಪ್ರಸಾದ್ ವಕೀಲರ ಮುಾಲಕ ಪ್ರತ್ಯುತ್ತರವನ್ನು ನೀಡಿರುತ್ತೇನೆ . ಸದರಿ ಪ್ರತ್ಯುತ್ತರ ನನ್ನ ತಂದೆಗೆ ತಲುಪಿರುತ್ತದೆ . ಸದರಿ ಪ್ರತ್ಯುತ್ತರದ ಪ್ರತಿ ಹಾಗೂ ಸದರಿ ಉತ್ತರ ನನ್ನ ತಂದೆಗೆ ತಲುಪಿದ ಬಗ್ಗೆ ಅಂಚೆಯ ಹಿಂಬರಹವನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಬಹುದಾ ಎಂದರೆ ಪಡಿಸಬಹುದು . ನನ್ನ ತಂದೆ ಕಳುಹಿಸಿದ ನೋಟೀಸಿಗೆ ನನ್ನ ವಕೀಲರ ಮೂಲಕ ಪ್ರತ್ಯುತ್ತರ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಆ ರೀತಿ ಯಾವುದೇ ಪ್ರತ್ಯುತ್ತರವನ್ನು ನೀಡಿಲ್ಲ ಎಂದರೆ ಸರಿಯಲ್ಲ . ಯಾವುದೇ ಪ್ರತ್ಯುತ್ತರವನ್ನು ನೀಡಿಲ್ಲದೇ ಇರುವುದರಿಂದ ಸದರಿ ಪ್ರತ್ಯುತ್ತರದ ಪ್ರತಿ ಹಾಗೂ ಅಂಚೆ ಹಿಂಬರಹದ ಪ್ರತಿ ನನ್ನ ಬಳಿ ಇಲ್ಲ ಎಂದರೆ ಸರಿಯಲ್ಲ.

4. ನನ್ನ ತಂದೆ ನಿಡಿ-1 ನ್ನು ಕಳುಹಿಸುವ ಸಮಯದಲ್ಲಿ ಅವರು ನನ್ನ ಅಣ್ಣನಾದ ಪಾಸ್ಕಲ್ ಜೊತೆ ಇದ್ದರು ಎಂದರೆ ಸರಿಯಲ್ಲ ನನ್ನ ಜೊತೆ ಇದ್ದರು . ನನ್ನ ತಂದೆ ಸಹಾಯ ಆಯುಕ್ತರು , ಮಂಗಳೂರು ಇವರಿಗೆ ನನ್ನ ವಿರುದ್ಧ ದೂರನ್ನು ನೀಡಿರುತ್ತಾರೆ ಎಂದರೆ ಸರಿ . ಸದರಿ ದೂರನ್ನು ನೋಡುತ್ತಿದ್ದು , ಅದನ್ನು ನಿಡಿ-2 ಎಂದು ಗುರುತಿಸಲಾಯಿತು . ಹಿರಿಯ ನಾಗರೀಕ ಸಹಾಯವಾಣಿ ಕೇಂದ್ರದವರು ನನ್ನ ತಂದೆ ನೀಡಿದ ದೂರಿನಂತೆ ತನಿಖೆ ಮಾಡಬೇಕೆಂದು ಆದೇಶ ಮಾಡಿರುವ ಪ್ರತಿ ಎಂದರೆ ಸಾಕ್ಷಿಯು ನನ್ನ ವಿರುದ್ಧ ಮಾತ್ರವಲ್ಲದೆ ಇತರೆ ಮಕ್ಕಳ ವಿರುದ್ಧವೂ ಆದೇಶ ಮಾಡಿರುತ್ತಾರೆ ಎಂದು ನುಡಿಯುತ್ತಾರೆ . ಸದರಿ ಆದೇಶದ ಪ್ರತಿಯನ್ನು ನಿಡಿ-3 ಎಂದು ಗುರುತಿಸಲಾಯಿತು .

ನಿಡಿ-3 ರಂತೆ ನಿಮ್ಮನ್ನು ವಿಚಾರಣೆ ಮಾಡಿರುತ್ತಾರಾ ಎಂದರೆ ನನ್ನನ್ನು ವಿಚಾರಣೆ ಮಾಡಿರುತ್ತಾರೆ . ನಿಡಿ-3 ರಂತೆ ಎಲ್ಲಾ ಮಕ್ಕಳಿಗೆ ನೋಟೀಸು ಹೋದ ಬಗ್ಗೆ ದಾಖಲೆ ಇದೆಯಾ ಎಂದರೆ ದಾಖಲೆ ಇದೆ . ಸದರಿ ನೋಟೀಸನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಬಹುದಾ ಎಂದರೆ ಪಡಿಸಬಹುದು . ಆ ರೀತಿ ಎಲ್ಲಾ ಮಕ್ಕಳಿಗೂ ನೋಟೀಸು ಆಗಿಲ್ಲ ಎಂದರೆ ಸರಿಯಲ್ಲ . ನೋಟೀಸ್ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಮ್ಮ ತಂದೆ ನನ್ನ ವಿರುದ್ಧ ಮೂಡಬಿದ್ರೆ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿದ್ದು , ಆ ಬಗ್ಗೆ ಪೊಲೀಸರು ನೀಡಿದ ಹಿಂಬರಹವನ್ನು ಈಗ ನೋಡುತ್ತಿದ್ದು , ಅದನ್ನು ನಿಡಿ-4 ಎಂದು ಗುರುತಿಸಲಾಯಿತು .

5. 2019-2020 ರ ಪ್ರಾರಂಭದಲ್ಲಿ ನನ್ನ ತಂದೆಯು ಫಾಸ್ಕಲ್ ಪಿಂಟೋ ರವರ ಮನೆಯಲ್ಲಿ ನನ್ನ ತಂದೆಗೆ ಆನಾರೋಗದ ನಿಮಿತ್ತ ಮಂಗಳೂರಿನ ಮಂಗಳಾ ಆಸ್ಪತ್ರೆಗೆ ಸೇರಿಸಿರುತ್ತೇನೆ. ಸದರಿ ಆಸ್ಪತ್ರೆಯಲ್ಲಿ ನನ್ನ ತಂದೆ ದಾಖಲಾದ ಸಮಯದಲ್ಲಿ ಅವರ ಎಲ್ಲಾ ವೈದ್ಯಕೀಯ ವೆಚ್ಚವನ್ನು ಫಾಸ್ಕಲ್ ಪಿಂಟೋ ರವರು ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ , ನಾನು ನೋಡಿಕೊಂಡಿರುತ್ತೇನೆ . ಆ ಬಗ್ಗೆ ದಾಖಲೆಗಳು ನನ್ನ ಬಳಿ ಇದೆ . ಅದನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಬಹುದು . ಅಂತಹ ಯಾವುದೇ ದಾಖಲೆಗಳು ನನ್ನ ಬಳಿ ಇಲ್ಲ ಎಂದರೆ ಸರಿಯಲ್ಲ . ಹಾಗೂ ನಾನು ಅವರನ್ನು ನೋಡಿಕೊಂಡಿಲ್ಲ ಎಂದರೆ ಸರಿಯಲ್ಲ .

6. ನನ್ನ ತಾಯಿ ನನ್ನ ಜೊತೆಯಲ್ಲಿ ಇದ್ದರು ಹಾಗೂ ನನ್ನ ಜೊತೆ ಚೆನ್ನಾಗಿ ಇದ್ದರು . ಅವರ ಎಲ್ಲಾ ಖರ್ಚು-ವೆಚ್ಚಗಳನ್ನು ಹಾಗೂ ನ್ಯಾಯಾಲಯದ ಖರ್ಚು-ವೆಚ್ಚಗಳನ್ನು ನಾನೇ ಭರಿಸಿರುತ್ತೇನೆ. ಅವರ ಜೊತೆ ಕೋರ್ಟಿಗೆ ಹೋದಾಗ ವಕೀಲರಿಗೆ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ .

ನಮ್ಮ ತಾಯಿಯ ಮೂಲಕ ನನ್ನ ತಂದೆಯ ವಿರುದ್ಧ ಮಾನ್ಯ ಕೌಟುಂಬಿಕ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿರುತ್ತೇನೆ . ನನ್ನ ತಾಯಿಗೆ ಮಂಡಿ ಮರುಜೋಡಣೆ ಆಗಿದ್ದುದ್ದರಿಂದ ಅವರನ್ನು ನಾನು ಕರೆದುಕೊಂಡುಹೋಗಿರುತ್ತೇನೆ . ಸಾಕ್ಷಿ ಮುಂದುವರಿದು ವಿದ್ಯಾವಂತಳಾಗಿದುದ್ದರಿಂದ ಸದರಿ ದಾವೆಯನ್ನು ಮಾನ್ಯ ಕೌಟುಂಬಿಕ ನ್ಯಾಯಾಲಯದಲ್ಲಿ ಅವರೇ ದಾಖಲು ಮಾಡಿರುತ್ತಾರೆ . ಸದರಿ ದಾಖಲೆಯನ್ನು ನೋಡುತ್ತಿದ್ದು , ಅದನ್ನು ನಿಡಿ-5 ಎಂದು ಗುರುತಿಸಲಾಯಿತು .

7. ನನ್ನ ತಾಯಿಗೆ ಮದ್ಯಪಾನ ಸೇವಿಸುವ ಚಟವಿತ್ತು . ಸದರಿ ಚಟದಿಂದ ಅವರನ್ನು ಬಿಡಿಸಲು ಕಂಕನಾಡಿಯ ಫಾದರ್ ಮುಲ್ಲರ್ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು . ಅದು ಯಾವ ಇಸವಿಯಲ್ಲಿ ಎಂದು ಈಗ ನೆನಪಿಲ್ಲ , ಅಂದಾಜು 2005 ಒಳಗೆ ಇರಬಹುದು . ನಂತರವೂ ಅವರ ಕುಡಿತದ ಚಟ ಬಿಡದೆ ಅವರ ಆರೋಗ್ಯ ಸ್ಥಿತಿ ಹದಗೆಟ್ಟಿತ್ತು ಎಂದರೆ ಕುಡಿತದ ಚಟ ಬಿಟ್ಟಿದ್ದರು ಆದರೆ ಅವರ ಆರೋಗ್ಯ ಸರಿ ಇರಲಿಲ್ಲ . ತಾಯಿಯು ಸಾಯುವ ಮೊದಲು ಕುಪ್ಪೆಪದವಿನ ಮರಿಯಗಿರಿ ಆಶ್ರಮಕ್ಕೆ ಅವರನ್ನು ದಾಖಲು ಮಾಡಲಾಗಿತ್ತು ಎಂದರೆ ಅದು ಆಶ್ರಮವಲ್ಲ ಅದು ಆಸ್ಪತ್ರೆಯಾಗಿತ್ತು ಅಲ್ಲಿ ಅವರು ದಾಖಲು ಮಾಡಲಾಗಿತ್ತು . ಆ ರೀತಿ ಅವರನ್ನು ಪ್ರದೀಪ್ ಕ್ಲೈಮೆಂಟ್ ಪಿಂಟೋ ಒಬ್ಬರೇ ದಾಖಲು ಮಾಡಿದ್ದರು ಎಂದರೆ ಸರಿಯಲ್ಲ . ನಾನು ಪ್ರದೀಪ್ ಕ್ಲೈಮೆಂಟ್ ಪಿಂಟೋ ಮತ್ತು ನಾಯಲ್ ಪ್ರವೀಣ್ ಪಿಂಟೋ ದಾಖಲು ಮಾಡಿರುತ್ತೇವೆ . ನನ್ನ ತಾಯಿಗೆ ಪಾರ್ಶ್ವ ವಾಯು ಸಹ ಆಗಿತ್ತು . ಅವರನ್ನು ನೋಡಿಕೊಳ್ಳಲು ಹೋಂ ನರ್ಸ್ ಇದ್ದರು ಎಂದರೆ ಅವರನ್ನು ನೋಡಿಕೊಳ್ಳಲು ಒಬ್ಬರು ಕೆಲಸದವರು ಇದ್ದರು . ಸದರಿ ಕೆಲಸದವರಿಗೆ ಪ್ರತಿ ತಿಂಗಳೂ 21000/- ರೂಗಳ ಹಣವನ್ನು ಜಾನ್ ವಿಲ್ಸನ್ ರವರು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ನನ್ನ ತಾಯಿ ಮರಣ ಹೊಂದು ಮೊದಲು ಫಾದರ್ ಮುಲ್ಲರ್ ಆಸ್ಪತ್ರೆಯಲ್ಲಿ 7 ದಿನಗಳು ಇದ್ದರು ಎಂದರೆ ನನಗೆ ಗೊತ್ತಿಲ್ಲ.

ಸದರಿ 7 ದಿನಗಳಲ್ಲಿ 60000/- ರೂಗಳ ಹಣ ಖರ್ಚಾಗಿತ್ತು ಎಂದರೆ ನನಗೆ ಗೊತ್ತಿಲ್ಲ . ಸದರಿ ಖರ್ಚನ್ನು ಜಾನ್ ವಿಲ್ಸನ್ ಪಿಂಟೋರವರು ಭರಿಸಿರುತ್ತಾರೆ ಎಂದರೆ ಗೊತ್ತಿಲ್ಲ . ನನ್ನ ತಾಯಿಗೆ ಮಧ್ಯ ಪಾನ ಚಟದಿಂದ ಅವರ ಲಿವರ್ ಡ್ಯಾಮೇಜ್ ಆಗಿತ್ತು ಎಂದರೆ ಇಲ್ಲ . ನನ್ನ ತಾಯಿಗೆ ಇದ್ದ ಮಧ್ಯಪಾನದ ಚಟವನ್ನು ದುರುಪಯೋಗ ಪಡಿಸಿಕೊಂಡು ನನ್ನ ತಂದೆಯ ಮತ್ತು ನನ್ನ ಅಣ್ಣ-ತಮ್ಮಂದಿರ ಮೇಲೆ ಸುಳ್ಳು ದಾವೆಗಳನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ .

(ಮುಂದುವರಿದ ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದು , ಸಮಯಾವಕಾಶ ನೀಡಿ ಮುಂದೂಡಲಾಯಿತು.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೆ.ಕೇ ಸ ಇದೆ .

ಸಹಿ/-
ವ್ಯ ನ್ಯಾ ಮತ್ತು ಪ್ರ.ದ.ನ್ಯಾದಂ.
ಮೂಡಬಿದಿರೆ